# ಸಾಗರ ಸಮ್ಮುಖ...

*I want to know what it says, the sea. What it is that it keeps on saying?*
**- Dombey & Son**

**ಭಾನುವಾರ, ಆಗಸ್ಟ್ ಇಪ್ಪತ್ತು...**

ಬೇಕಲ್ ಕೋಟೆಯ ಗೋಡೆಯಾಚೆಗೆ ಸಮುದ್ರದ ಪರಿಧಿ ಕಾಣುತ್ತಿದ್ದಂತೆಯೇ ಇವಳು ಕೈತಟ್ಟಿ ಕುಣಿದು ಕುಪ್ಪಳಿಸಿದಳು,

"ಸಮುದ್ರ ಕಾಣ್ತಿದೆ, ನೋಡು!"

"ಹೌದಾ?" ಅವನು ಯಾಕೋ ಅನ್ಯಮನಸ್ಕನಾದ. ಮಂಕು ಕವಿದ ಬೆಳಗಿನ ಹನ್ನೊಂದು ಗಂಟೆಯಲ್ಲಿ ಹೂಮಳೆಯ ಇನ್ನೊಂದು ಉದುರು ಶುರುವಾದಂತೆ ಅವಳು ನಡುಗಿದಳು, "ಬಾ ಓಡೋಣ!"

ಇಬ್ಬರೂ ಬೇಗ ಬೇಗ ನಡೆದು ಕೋಟೆಯ ಗೋಡೆ ತಲುಪಿಕೊಂಡರು. ಕೈಗೋಡೆಯ ಅಂಚಿಗೆ ನಿಂತು ಹೊರಗಡೆ ನೋಡಿದರು. ಕೋಟೆಯಿಂದ ಮೂವತ್ತು ಅಡಿ ಕೆಳಗೆ, ಇಳಿವ ಮೆಟ್ಟಿಲುಗಳ ಆಚೆ ಬೆನ್ನು ಹರಡಿಕೊಂಡು ಬಿದ್ದಿದ್ದ ಬಂಡೆಗಳ ಹಿಂದೆ ಸಮುದ್ರ ಭೋರ್ಗರೆಯುತ್ತಿತ್ತು. ಮೇಲೆ ಬೂದಿಬಡಿದುಕೊಂಡಿದ್ದ ಮಳೆಯಾಕಾಶ; ದೂರದಲ್ಲೆಲ್ಲೋ ಸಮುದ್ರದ ಅಂಚಿನಲ್ಲಿ ಹರಿದುಕೊಂಡು ಬಿದ್ದಿದ್ದ ಮೋಡ-ಮಳೆ! ಒಳಗೊಳಗೇ ಬೆವರಾಗಿಸುತ್ತಿದ್ದ ಕರಾವಳಿಯ ಬಿಸುಪು; ಆಗೀಗ ಸುಮ್ಮಸುಮ್ಮನೆ ಶುರುವಾಗಿ, ತಟ್ಟನೆ ನಿಂತು ಹೋಗುತ್ತಿದ್ದ ಹೂಮಳೆ; ಮಳೆಯಿಂದಾಗಿ ಕೆಸರು-ಕೆಸರಾಗಿದ್ದ ಅಲೆಗಳು-ತಮ್ಮಲ್ಲೇ ಅಳೆದುಕೊಂಡು, ಸುರಿದು ಕೊಂಡು, ತೀರದ ಬಂಡೆಗಳಿಗೆ ನೊರೆನೊರೆಯಾಗಿ ಬಂದು ಅಪ್ಪಳಿಸುತ್ತಿದ್ದವು...

"ಅಯ್ಯಯ್ಯೋ. ಕೊಳಕು, ಕೊಳಕು. ಮೈಯೆಲ್ಲ ಕೆಸರು ಮಾಡಿಕೊಂಡು ಕುಣಿತಾ ಇದೆಯಲ್ಲೋ ಇದು! ತುಂಟ ಮಗು ತರಾ ಎಗ್ಗಿಲ್ಲದೇ ಮಳೇಲಿ ಬೇರೆ ನೆನೀತಾ ಇದೆ"

"ಹೌದು, ಚಾಕೊಲೆಟ್-ಕ್ಯಾರಮೆಲ್ ಮಿಲ್ಕ್ ಶೇಕ್! ನೋಡು, ತಂತಾನೇ ಹೇಗೆ ಸ್ಕಿಮ್ ಮಾಡ್ಕೊಂಡು, ಸುರಿದುಕೊಂಡು ಚೆಲ್ಲಿಕೋತಾ ಇದೆ?" ಅವನ ಬಿಗುವು ಸಮುದ್ರದ ಹೊಸ ರೂಪ ನೋಡಿ ಸ್ವಲ್ಪ ಕರಗಿದಂತಾಯ್ತು. ದೊಡ್ಡಲೆ, ಚಿಕ್ಕಲೆ, ಸಣ್ಣ ಅಲೆ, ಅಲೆಗಳ ಸಮೂಹ, ನೊರೆನೊರೆಯಾಗಿ, ಒಂದಕ್ಕಿಂತ ಒಂದು ಹೆಚ್ಚೆಂದು ತೋರಿಸಿಕೊಳ್ಳುವಂತೆ ಬಂದು ದಡದಲ್ಲಿದ್ದ ಕೋಡುಗಲ್ಲ ಬಂಡೆಗಳಿಗೆ ಅಪ್ಪಳಿಸಿ, ಬಿದ್ದು ಹೋಗುತ್ತಿದ್ದವು. ಇಬ್ಬರೂ ನಿಂತು, ಸಮುದ್ರದ ಅಲೆಗಳನ್ನು, ದೂರದಲ್ಲಿ ಕೆಸರೆಲ್ಲ ಕಳೆದು ಸಹಜ-ಸ್ವರೂಪವಾಗಿ ನೀಲಿಯಾಗಿದ್ದ ಸಮುದ್ರದ ಅಂಚನ್ನು, ಆಕಾಶವನ್ನೂ, ಎಡಕ್ಕೆ ಕೋಡುಗಲ್ಲುಗಳಾಚೆಗಿದ್ದ ಸಮುದ್ರದ ಮರಳ ತೀರ, ತೀರದಿಂದ ದೂರಕ್ಕೆಳೆದು ನಿಲ್ಲಿಸಿದ್ದ ದೋಣಿಗಳು, ಅವುಗಳ ಹಿಂದಿನ ತೆಂಗಿನ ತೋಟವನ್ನೆಲ್ಲ ದಿಟ್ಟಿಸಿ ನೋಡಿದರು, ಅಲೆಗಳ ಲೆಖ್ಖ ಹಾಕಿದರು, 'ನನ್ನದು ಆ ದೊಡ್ಡ ಅಲೆ', 'ನೋಡು, ನನ್ನ ಅಲೆ ಎಷ್ಟು ಎತ್ತರ ಹಾರ್ತಾ ಇದೆ' ಅಂತೆಲ್ಲ ಆಟ ಆಡಿದರು. ಕೋಟೆಯ ಒಂದು ಗೋಡೆ, ಮುಖ್ಯ ಪ್ರಾಕಾರದಿಂದ ಸಮುದ್ರದೆಡೆಗೆ ಇಳಿದು, ಸಮುದ್ರಕ್ಕೆ ತಾಕಿದಂತೆಯೇ ಒಂದು ಸಣ್ಣ ಬುರುಜಾಗಿ ಕೊನೆಯಾಗಿತ್ತು.

"ಹೇ ಅಲ್ನೋಡು, ಅರವಿಂದ್‌ಸ್ವಾಮಿಗೋಸ್ಕರ ಮನೀಶಾ ಓಡಿ ಬರ್ತಾಳಲ್ಲ ಆ ಸ್ಪಾಟ್!"

"ಬಾಂಬೆ ಪಿಚ್ಚರಲ್ಲಿ ತಾನೇ?"

"ಹೂಂ. ಬಾ ಅಲ್ಲಿಗೆ ಇಳಿದು ಹೋಗೋಣ!". ಇಬ್ಬರೂ ಇಳಿದು ಹೋದರು. ಆ ವೃತ್ತಾಕಾರದ ಬುರುಜಿನ ಮೇಲೆ ಇವಳು, ಕೈಗಳೆರಡನ್ನೂ ಚಾಚಿಕೊಂಡು ಗಿರಗಿಟ್ಲೆಯಂತೆ ಸುತ್ತ ತಿರುಗಿದಳು. ಅವನು ಬುರುಜಿನ ಆಚೆಗೆ ಬೃಹದಾಕಾರವಾಗಿ ನಿಂತಿದ್ದ ಕೋಡುಗಲ್ಲನ್ನೂ, ಅದಕ್ಕೆ ಪೈಪೋಟಿಯಿಂದೆಂಬಂತೆ ಬಂದು ಹೊಡೆಯುತ್ತಿದ್ದ ಅಲೆಗಳನ್ನೂ ದಿಟ್ಟಿಸಿ ನೋಡುತ್ತಿದ್ದ. ಕೆಲವೊಮ್ಮೆ ದೊಡ್ಡ ಅಲೆ ಬಂದು ಕೋಡುಗಲ್ಲಿಗೆ ಬಡಿದಾಗ ಅಲೆಯ ನೀರು ಬುರುಜಿಗೂ ಬಡಿದು, ಮೇಲೆ ನಿಂತವರನ್ನೂ ನೆನೆಸಿ ಉಸಿರುಗಟ್ಟಿಸುತ್ತಿತ್ತು. ತಿರುಗಿ ಸುಸ್ತಾದ ಮೇಲೆ ಇವಳು ಅವನ ಬಳಿ ಬಂದು ಬೆನ್ನಿಗೆ ಆತುಕೊಂಡಳು.

"ಏನೋ ಯೋಚನೆ ಮಾಡ್ತಿದೀಯಾ?"

"ಏನಿಲ್ಲ"

"ಏನಿಲ್ದೇ ಏನು ಯೋಚನೆ ಮಾಡ್ತಿದ್ದೆ ಅಂತಲಾದ್ರೂ ಹೇಳು!"

"ಹಹ್ಹಹಾ!" ಇವಳ ಕುತರ್ಕಕ್ಕೆ ಅವನು ನಕ್ಕ, "ಇದೇ ಕ್ಷಣ, ಹೀಗೇ ಹೆಪ್ಪುಗಟ್ಟಿಬಿಡಲಿ ಅಂತನಿಸ್ತಿದೆ."

"ಯಾಕೆ? ನಿನಗೆ ಬೇಡಾಂದ್ರೆ ಬೇರೆ ಯಾರಿಗೂ ಕಾಲ ಮುಂದೆ ಓಡೋದು ಬೇಡವೇನು? ತುಂಬಾ ಸ್ವಾರ್ಥಿ ನೀನು"

“ಬೇರೆಯವರಿಗೆಲ್ಲ ಅಲ್ಲ. ನಮ್ಮ ಪಾಲಿಗೆ ಮಾತ್ರ ಕಣೇ. ನಾವಿಬ್ಬರೂ ಹೀಗೇ ಇದೊಂದೇ ಕ್ಷಣದಲ್ಲಿ ಇಡೀ ಜೀವನವನ್ನು ಕಳೆದುಕೊಂಡು ಬಿಡಬೇಕು ಅಂತನಿಸುತ್ತೆ ಕಣೇ”

“ಓಹೋ ಹಾಗಾ ಯೋಚನೆ, ಹಾಗಾದ್ರೆ ನಮ್ಮ ಈ ಜೀವನದಲ್ಲಿ ಮದುವೆ, ಮಕ್ಕಳು, ಮೊಮ್ಮಕ್ಕಳು ಅನ್ನೋ ಕನಸಿಲ್ವಾ?” ಅವನ ಕತ್ತಿನ ಹಿಂದಿನ, ತಲೆಯ ಕೂದಲನ್ನು ಹಿಡಿದು ಜಗ್ಗಿದಳು, ಅವನು ನೋವಿನಿಂದ ತಿರುಗಿ ಇವಳ ಪೋನಿಟೈಲ್ ಹಿಡಿದೆಳೆದ.

* * * * * * * *

“ಹೇಳೋ? ರಾತ್ರಿ ಬರ್ತಾ ಬಸ್ಸಿನಲ್ಲಿ ನನ್ನ ತಲೆ ತಿಂದೂ ನಿನಗಿನ್ನೂ ಏನೋ ಹೇಳೋಕಿದೆ ಅನಿಸ್ತಿದೆ. ಕಮಾನ್ ಸ್ಪೀಕ್ ಔಟ್!”

“ಏನು, ಪೋಲಿಸ್ ಇಂಟರಾಗೇಶನ್ನಾ?”

“ಮತ್ತಿನ್ನೇನು? ಪೋಲಿಸ್ ಕಮಿಶನರ್ ಮಗಳಾದ ಮೇಲೆ ಇದೆಲ್ಲ ಗೊತ್ತಿರಲೇಬೇಕು!”, ತಟ್ಟನೆ ಮೌನವಾದ ಅವನನ್ನು ನೋಡಿ, ಏನೋ ಕಂಡು ಹಿಡಿದವಳಂತೆ ಇವಳು ವಿಚಾರಿಸಿದಳು, “ಜಸ್ಟ್ ಎ ಮಿನಿಟ್! ನಮ್ಮ ಜೀವನದಲ್ಲಿ ಮದುವೆ, ಮಕ್ಕಳು, ಮೊಮ್ಮಕ್ಕಳು ಅನ್ನೋ ಕನಸುಗಳಿಲ್ದೇ ಇರೋಕೆ ನಮ್ಮಪ್ಪ ಪೋಲಿಸ್ ಕಮಿಶನರ್ ಅನ್ನೋ ಹೆದರಿಕೆ ಕಾರಣ ಅಲ್ಲಾ ತಾನೇ?”

“ಹೆದರಿಕೆ ಅಂತೆಲ್ಲ ಮಾತಾಡ್ಬೇಡ!”

“ಯಾಕೆ? ಹೆದರಿಕೆ ಅನ್ನೋ ಪದ ಕೇಳೀನೇ ಹೆದರಿಕೆ ಆಗುತ್ತಾ?”

ಇಬ್ಬರೂ ಬುರುಜಿನಿಂದಿಳಿದು ಮರಳಿನ ತೀರಕ್ಕೆ ಬಂದು ಕುಳಿತಿದ್ದರು. ಅಲೆಗಳು ಇವರನ್ನು ತಾಕುವಷ್ಟು ಹತ್ತಿರಕ್ಕೆ ಬರದಿದ್ದರೂ ಹೂಮಳೆಯಿಂದಾಗಿ ಮರಳು ನೆನೆದಿತ್ತು. ಕಾಲ ಮೇಲೆ ಕಾಲು ಚಾಚಿಕೊಂಡು ಕುಳಿತಿದ್ದ ಇವಳ ಕಾಲ ಬೆರಳುಗಳ ಜೊತೆ ಆಟವಾಡುತ್ತಿದ್ದ ಅವನು ಮೆಲ್ಲನೆ ನುಡಿದ,

“ಕನಸುಗಳು ತುಂಬಾ ಮೋಸ ಮಾಡುತ್ವೆ ಕಣೇ! ಈಗಿರೋದೇ ನನಸು. ಇದನ್ನೇ ಒಂದು ಸುಂದರ ಕನಸು ಅಂತ ಅಂದ್ಕೊಂಡ್ರೆ ಕಂಡ ಕನಸೆಲ್ಲ ನಿಜವಾದ ಹಾಗೇನೇ ತಾನೇ?”

“ಹಾಗಂದ್ರೆ ಮುಂದಿನ ಭವಿಷ್ಯದ ಬಗ್ಗೆ ಕನಸು ಕಾಣೋದು ತಪ್ಪೇ?”

“ಖಂಡಿತಾ ತಪ್ಪು! ಈ ಕ್ಷಣಕ್ಕೆ ನಿನ್ನ ಕೆಪಾಸಿಟಿಯಲ್ಲಿ ಏನೆಲ್ಲ ಸಾಧ್ಯ ಇದೆಯೋ ಎಲ್ಲವನ್ನೂ ಮಾಡು, ಆದ್ರೆ ಅದರಿಂದ ನಿನಗಿಷ್ಟವಾದ ಪರಿಣಾಮ ಆಗಲೇ ಬೇಕಂತ ಮಾತ್ರ ಕನಸು ಕಾಣಬೇಡ.”

“ದೊಡ್ಡ ಗೀತಾಚಾರ್ಯ ಇವನು!” ಬೆರಳುಗಳಲ್ಲಿ ಮರಳನ್ನೆತ್ತಿ ಅವನತ್ತ ಎಸೆದಳು.

“ನೀನು ಗುರ್ಗಾವ್‌ಗೆ ಹೋದ ಈ ಐದು ತಿಂಗಳಲ್ಲಿ ನಾನು ಏನಾಗಿದೀನಿ ಅಂತ ನಿನಗೇನು ಗೊತ್ತು?”

“ನನಗೆ ಗೊತ್ತಿಲ್ಲ. ಗೊತ್ತಾಗೋದು ಬೇಡ, ಯಾಕೇಂದ್ರೆ ನಾನು ಅವೇ ಐದು ತಿಂಗಳಲ್ಲಿ ಏನಾಗಿದೀನಿ ಅಂತ ನಿನಗೂ ಗೊತ್ತಿಲ್ಲ!” ಇವಳು ಸಿಟ್ಟಿಲ್ಲದ ಧ್ವನಿಯಲ್ಲಿ ನುಡಿದಳು, “ಬೆಂಗಳೂರಿನಲ್ಲೇ ಇದ್ದಿದ್ದರೆ ಇಷ್ಟೊತ್ತಿಗೆ ನಮ್ಮಪ್ಪ ನನ್ನ ಮದುವೆ ಮಾಡಿ ಕಳ್ಸಿರೋರು, ನಿನ್ನ ಕನಸೆಲ್ಲ ಮಣ್ಣಾಗಿರೋದು!”

“ಕನಸು? ನೀನ್ಯಾವತ್ತೂ ನನ್ನ ಕಣ್ಣು ತೆರೆದರೆ ಮಾಯವಾಗಿಬಿಡುವ ಕನಸಲ್ಲ ಕಣೇ. ಸಿಕ್ಕಾಗಲೆಲ್ಲ ಕಣ್ಣು-ಹೃದಯ ಎರಡನ್ನೂ ತೆರೆದು ತುಂಬಿಕೊಳ್ಳೋ ನನಸು ನೀನು, ಯು ಆರ್ ಮೈ ಅಲ್ಟಿಮೇಟ್ ರಿಯಾಲಿಟಿ!”

“ಸೋ, ಆ ನನಸನ್ನ ನೀನು ಪ್ರೀತಿಸ್ತೀಯಾ?”

“ಒಂದು ವಿಷಯ ಹೇಳ್ಲಾ?” ಅವನು ಅವಳನ್ನೇ ಕತ್ತೆತ್ತಿ ನೋಡಿದ, “ನನಗಿಲ್ಲೇ ಈ ಸಮುದ್ರದಲ್ಲೇ ನಾವಿಬ್ಬರೂ ಒಂದಾಗಿರುವ ಈ ಕ್ಷಣವನ್ನೇ ಜೀವನವನ್ನಾಗಿಸಿ ಜೀವಿಸಿ, ನಮ್ಮನ್ನು ನಾವೇ ಮುಗಿಸಿಕೊಂಡು ಬಿಡಬೇಕು ಅನಿಸ್ತಿದೆ. ಇಲ್ಲಿಂದ ಹೋದರೆ ನೀನು ನನಗೆ ಮತ್ತೆ ಸಿಗೋಲ್ವೇನೋ ಅನ್ನಿಸಿಬಿಡುತ್ತೆ.”

“ಇದೆಲ್ಲ ಕನಸುಗಳಿಲ್ಲದ ಅತೃಪ್ತ ಆತ್ಮದ ರೋಧನ ಕಣೋ. ಸ್ವಲ್ಪ ಕಣ್ಣು ಬಿಟ್ಟು ನೋಡು. ಕನಸು ಕಾಣೋದು, ಕನಸಿನ ಸಾಕ್ಷಾತ್ಕಾರಕ್ಕೋಸ್ಕರ ದುಡಿಯೋದು, ಒಂದು ಕನಸು ಮುರಿದುಬಿದ್ದರೆ ಮತ್ತೊಂದು ಹೊಸ ಕನಸು ಕಟ್ಟಿಕೊಳ್ಳೋದು ಇದೇ ಜೀವನ... ಅದೆಲ್ಲ ಬಿಟ್ಟು ಬಿಡು ಈಗ. ಮೊದಲು ಹೇಳು, ನಿನ್ನ ಅಲ್ಟಿಮೇಟ್ ರಿಯಾಲಿಟೀನ ಪ್ರೀತಿಸ್ತೀಯಾ?”

“ಹೂಂ”

“ಅದೆಲ್ಲ ಬೇಡ, ಬಾಯಿ ಬಿಟ್ಟು ಹೇಳು”

“ಏನು ಹೇಳಲಿ?” ಅವನು ತುಂಟತನದ ನಗುನಕ್ಕ.

“ನಿನ್ನ ಅಲ್ಟಿಮೇಟ್ ರಿಯಾಲಿಟೀನ ಪ್ರೀತಿಸ್ತೀಯ ಅಂತ”

“ನನ್ನ ಅಲ್ಟಿಮೇಟ್ ರಿಯಾಲಿಟೀನ ಪ್ರೀತಿಸ್ತೀನಿ ನಾನು”

“ಹೇ!” ಅವಳು, ಅವನ ಕೈಗಳಿಂದ ತನ್ನ ಕಾಲ್ಬೆರಳುಗಳನ್ನು ಬಿಡಿಸಿಕೊಂಡಳು, “ಅದಲ್ಲ ನಾನು ಹೇಳಿದ್ದು!”

“ಮತ್ತೆ?” ಪೆದ್ದನಂತೆ ಮುಖ ಮಾಡಿದ ಅವನನ್ನು ನೋಡಿ ಅವಳು ಒಂದು ಪರಿಹಾರ ಸೂಚಿಸಿದಳು,

“ಏನು ಹೇಳ್ಬೇಕು ಅಂತಾ ನಿಂಗೆ ಗೊತ್ತಿಲ್ವಲ್ಲ. ಅದಕ್ಕೆ ನಾನು ಮೊದಲು ಮರಳ ಮೇಲೆ ಬರೀತೀನಿ, ನೀನು ಮೊದಲು ಅದನ್ನ ಹೇಳ್ಬೇಕು, ಆಯ್ತಾ?” ಅವಳು ಮರಳಿನ ಮೇಲೆ ಬರೆದಳು, “ಇವೇ ಮೂರು ಪದ, ಹೇಳು! ಹೆದರ್ಕೋಬೇಡ ಹೇಳು!”

“ಮೋಸ ಇದು, ನಾನು ಹೇಳೋಲ್ಲ. ಬೇಕಾದ್ರೆ ನಾನೂ ಬರೀತೀನಿ, ನಿನ್ನ ತ್ರೀ ಮ್ಯಾಜಿಕಲ್ ವರ್ಡ್ಸ್‌ನ!” ಅವನು ಬರೆದ. ಇವಳು ಸುಮ್ಮನೇ ರೇಗಿದಳು, “ಹೋಗು ಹಾಗಾದ್ರೆ ನನ್ನ ಜೊತೆ ಮಾತಾಡಬೇಡ!”

ಅವನು ಸುಮ್ಮನೆ ಬೆರಳುಗಳಿಂದ ಅವಳು ಬರೆದುದಕ್ಕೂ, ತಾನು ಬರೆದುದಕ್ಕೂ ದೊಡ್ಡ ದೊಡ್ಡ ವೃತ್ತಗಳನ್ನು ಬರೆದು, ಒಂದು ಗೆರೆಯನ್ನೆಳೆದು ಅವುಗಳನ್ನು ಜೋಡಿಸಿದ.

...

ಮಾತು, ಮೌನ, ನಿಟ್ಟುಸಿರು, ಜಗಳ, ಮುನಿಸುಗಳ ನಡುವೆ ಮಳೆ, ಅಲೆ, ಸಮುದ್ರ, ಆಕಾಶಗಳ ಎದುರೇ ಹೊತ್ತು ಹಾರಿ, ಸಂಜೆಯಾಯಿತು.

“ಇನ್ನೂ ಏನೋ ಯೋಚನೆ ಮಾಡ್ತಿದೀಯಾ?”

“ಏನಿಲ್ಲ!” ಅವನ ಪೆಚ್ಚು ಮುಖ ನೋಡಿ ಅವಳು ನಕ್ಕಳು.

“ಇವೇ ಎರಡು ದಿನ. ಆಮೇಲೆ ನೀನು ಗುರ್ಗಾವ್, ನಾನು ಬೆಂಗಳೂರು. ಆಮೇಲೆ ಏನು?”

“ಅದಕ್ಕೇ? ನಾವಿಬ್ಬರೂ ಹೀಗೇ ಇಲ್ಲೇ ಇದ್ದು ಬಿಡೋಣ್ವಾ? ಸಮುದ್ರಕ್ಕೆ ಹಾರಿಕೊಂಡು ಅಮರರಾಗಿ, ಯಾವತ್ತಿಗೂ ಒಟ್ಟಿಗೇ ಆಗಿಬಿಡೋಣ್ವಾ?”

ಅವನು ಮಾತನಾಡಲಿಲ್ಲ. ಅವನ ಮುಖದಲ್ಲಿ ನಿರ್ಧಾರಕವಾದ ಮಂದಹಾಸ. ಇವಳ ಹೃದಯದಲ್ಲಿ ಏನೋ ಕಸಿವಿಸಿ.

“ಬಾ ಮೊದಲು ಕಾಸರಗೋಡಿಗೆ ವಾಪಸ್ಸು ಹೋಗಿ, ನಮ್ಮ ಹೋಟೆಲ್ ರೂಮಿನಿಂದ ಸುನೀತನಿಗೆ ಫೋನ್ ಮಾಡೋಣ. ನಾಳೆ ಮದುವೆ ಇಲ್ಲೇ ಯಾವುದೋ ಹಳ್ಳಿಯಲ್ಲಿದೆ. ಕಾಸರಗೋಡಿಗೆ ಬಂದು ಫೋನ್ ಮಾಡು, ಅಡ್ರೆಸ್ ಎಲ್ಲ ಹೇಳ್ತೀನಿ ಅಂತ ಹೇಳಿದ್ಳು, ಹೊಟ್ಟೆ ಬೇರೆ ತುಂಬಾ ಹಸೀತಾ ಇದೆ. ಹಸಿದ ಹೊಟ್ಟೇಲಿ ಸಮುದ್ರಕ್ಕೆ ಹಾರಿ ಸತ್ತರೆ ನರಕಕ್ಕೆ ಹೋಗ್ತೀವಿ ಅಂತೆ...”

* * * * * * * *

*I said to my soul, be still, and wait without hope, for hope would be hope for the wrong thing.*

**- T. S. Eliot**

**ಸೋಮವಾರ, ಆಗಸ್ಟ್ ಇಪ್ಪತ್ತೊಂದು...**

ಬೆಳಗಾಗುತ್ತಲೂ ಇವಳು ನುಡಿದಳು,

“ಇವತ್ತು ಮದುವೆಗೆ ಹೋಗೋಹಾಗಿಲ್ಲ ನಾವು. ವಾಪಸ್ಸು ಮತ್ತೆ ಬೇಕಲ್ ಕೋಟೆಗೆ!”

“ಏಯ್! ಹುಚ್ಚು ಹಿಡೀತೇನು ನಿನಗೆ?” ಅವನು ಅವಳ ನಿರ್ಣಯ ಕೇಳಿ ಅವನು ರೇಗಿದ.

“ಇಲ್ಲ ನನಗೇನೂ ಆಗಿಲ್ಲ. ಆದ್ರೆ ಇವತ್ತು ನಾವು ಸುನೀತಾ ಮದುವೆಗೆ ಹೋಗ್ತಾ ಇಲ್ಲ.”

“ನಾನು ಬರೋದ್ರಿಂದ ತೊಂದ್ರೆ ಆಗೋದಿದ್ರೆ ಹೇಳು, ನಾನಿಲ್ಲೇ ಇರ್ತೀನಿ. ನೀನೊಬ್ಳೇ ಮದುವೆಗೆ ಹೋಗಿಬಾ!”

“ಸುಮ್ನೇ ಏನೇನೋ ಮಾತನಾಡಬೇಡ! ತೊಂದ್ರೆ ಗಿಂದ್ರೆ ಏನೂ ಇಲ್ಲ. ನನಗಿವತ್ತು ಬೇಕಲ್ ಫೋರ್ಟ್‌ಗೆ ಹೋಗಬೇಕೆನಿಸ್ತಿದೆ ಅಷ್ಟೇ!”

“ಅಲ್ಲ. ಸುನೀತಾ ಮದುವೆಗೋಸ್ಕರ ಗುರ್ಗಾವ್‌ನಿಂದ ಬಂದೇ ತಾನೇ?”

“ಹೌದು ಬಂದೆ!”

"ಮತ್ತೆ ಈಗ ಇಲ್ಲೀವರೆಗೂ ಬಂದು ಅವಳ ಮದುವೆಗೆ ಹೋಗಲಿಲ್ಲ ಅಂದ್ರೆ?"

"ಅವಳ ಹತ್ರ ಮುಂದೆ ಯಾವತ್ತಾದ್ರೂ ಸಾರಿ ಕೇಳ್ತೀನಿ. ಆದ್ರೆ ಇವತ್ತು ನಾನು ಮದುವೆಗೆ ಹೋಗ್ತಾ ಇಲ್ಲ!"

"ತುಂಬಾ ಕೆಟ್ಟ ಪ್ಲಾನ್ ಇದು. ಅವಳ ಅಡ್ರೆಸ್ ಕೊಡು, ನಾನೊಬ್ಬನೇ ಹೋಗಿ ಬರ್ತೀನಿ! ನೀನೊಬ್ಬಳೇ ಬೇಕಲ್ ಫೋರ್ಟ್‌ಗೆ ಹೋಗು!"

"ಅದು ಸಾಧ್ಯ ಇಲ್ಲ ನಿಂಗೆ, ಪುಕ್ಕಲ ನೀನು! ಮದುವೆ ಮನೇಲಿ ಯಾರು ಗೊತ್ತು ನಿನಗೆ? ನಿನ್ನನ್ನು ಏನೂಂತ ಪರಿಚಯ ಮಾಡ್ಕೋತೀಯ?" ಇವಳು ಸವಾಲೆಸೆದಳು.

"ಹಾಗಾದ್ರೆ ನಿಜವಾಗಿಯೂ ನಾವಿವತ್ತು ಮದುವೆಗೆ ಹೋಗ್ತಾ ಇಲ್ವಾ?" ಅವನ ಪ್ರಶ್ನೆಗೆ ಇವಳು ಇಲ್ಲವೆಂಬಂತೆ ತಲೆಯಾಡಿಸಿದಳು.

"ಯೂ ಆರ್ ಔಟ್ ಆಫ್ ಯುವರ್ ಮೈಂಡ್! ವೆರಿ ಬ್ಯಾಡ್! ನನ್ನಹತ್ರ ಮಾತಾಡ್ಬೇಡ ನೀನು!" ಅವನ ಸಿಟ್ಟಿಗೆ ಪ್ರತಿಯಾಗಿ ಐವಳು ತುಂಬ ಸಾಮಾನ್ಯವೆನ್ನುವಂತೆ ನುಡಿದಳು,

"ಇರ್ಲೀ ಬಿಡು, ನೀನೂ ಮಾತಾಡ್ಬೇಡ ಗೊತ್ತಾಯ್ತಾ? ಆದ್ರೆ ಈವಾಗ ನಂಜೊತೆ ಕೆಳಗಡೆ ಹೋಟೆಲ್‌ಗೆ ತಿಂಡಿ ತಿನ್ನೋಕೆ ಬಾ. ಆ ಮೇಲೆ ಬೇಕಲ್ ಫೋರ್ಟ್‌ಗೆ ನಾನೇ ಎಳ್ಕೊಂಡ್ ಹೋಗ್ತೀನಿ!"

ಇಬ್ಬರೂ ಹೊರಟು, ಲಾಡ್ಜಿನ ಆರನೇ ಮಹಡಿಯಲ್ಲಿದ್ದ ತಮ್ಮ ರೂಮಿನ ಬೀಗ ಹಾಕಿಕೊಂಡು, ಕೆಳಗಿದ್ದ ಹೋಟೆಲಿಗೆ ತಿಂಡಿ ತಿನ್ನಲು ಇಳಿದು ಬಂದರು. ಅವನು ಅವಳಿಗೇನು ಬೇಕು ಅಂತೆಲ್ಲ ಕೇಳದೇ ತನಗೆ ಪೂರಿ-ಸಾಗು ಆರ್ಡರ್ ಮಾಡಿದ, ಇವಳು ಮಸಲೆ ದೋಸೆ. ಇಬ್ಬರೂ ಮೌನವಾಗಿ ತಿಂಡಿ ತಿಂದರು. ಅವನು ಎದ್ದು ಕೈತೊಳೆದುಕೊಳ್ಳಲು ಹೋದ. ಇವಳು ತಿಂಡಿ ತಿಂದ ಪ್ಲೇಟಿನಲ್ಲೇ ಶಾಸ್ತ್ರ ಮುಗಿಸಿದಳು. ಅವನು ಕೈತೊಳೆದು ಬಂದು ಇವಳು ಇಲ್ಲೇ ಕೈತೊಳೆದುಕೊಂಡಿದ್ದನ್ನು ನೋಡಿ ಕೇಳಿದ,

"ಕೈತೊಳೆಯಲ್ವಾ?"

"ತೊಳ್ಕೊಂಡೆನಲ್ಲಾ?" ಇವಳು ತನ್ನ ಕೈ ತೋರಿಸಿದಳು.

"ವ್ಯಾಕ್! ವಾಂತಿ ಬರ್ತಿದೆ ನಂಗೆ. ಸಕತ್ ಕೊಳಕು ನೀನು!"

ಅವನಿಗೇ ಬಿಲ್ ಕೊಡಲು ಬಿಟ್ಟು ಇವಳು ಹೊರ ಬಂದು ಹೊರಗಡೆ ನಿಂತಳು. ಆಕಾಶ ಇನ್ನೂ ಕವಿದು ಕೊಂಡಿತ್ತು. ಬೆಳಗಿನ ಹೂಮಳೆ ಆರಂಭವಾಗಿತ್ತು. ಬಿಲ್ ಕೊಟ್ಟು ಬಂದು ನಿಂತ ಅವನನ್ನು ಕೇಳಿದಳು,

"'ಇವತ್ತೂ ಯಾಕೆ ಬೇಕಲ್ ಫೋರ್ಟ್‌ಗೆ ಹೋಗ್ತಿದೀವಿ ಅಂತಾ ಕೇಳೋಲ್ವಾ?"

"ಆಗ್ಲೇ ಹೇಳಿದೆನಲ್ಲ. ನಾನು ಮಾತನಾಡೋಲ್ಲ. ಯು ಆರ್ ಮ್ಯಾಡ್!"

"ಓ ಹೌದಾ? ಒಳಗಡೆ ಹೋಟೆಲಿನಲ್ಲಿ ಮಾತು ಶುರುಮಾಡಿದವರು ಯಾರೋ?" ಇವಳು ಕಿಸಕ್ಕನೆ ನಕ್ಕು ಬಸ್ ಸ್ಟ್ಯಾಂಡಿನತ್ತ ನಡೆದಳು, ಅವನು ಹಿಂಬಾಲಿಸಿದ.

* * * * * * * *

ಬೇಕಲ್ ಕೋಟೆಯ ಒಳ ಹೊಕ್ಕು, ಆಚೆಗಿನ ಮೆಟ್ಟಿಲುಗಳಿಳಿದು, ಬಂಡೆಗಳ ದಾಟಿ, ಸಮುದ್ರದಂಚಿಗೆ ಬಂದು, ಮರಳ ಮೇಲೆ ಕುಳಿತರು. ಇಬ್ಬರದೂ ಮಾತಿಲ್ಲ. ಬಂದ ಅಲೆಗಳೆಲ್ಲ ಸರಾಗವಾಗಿ ನೆನೆಸುವಷ್ಟು ದೂರದಲ್ಲಿ ಸಮುದ್ರದೆಡೆಗೆ ಕಾಲು ಚೆಲ್ಲಿಕೊಂಡು ಕುಳಿತು, ಮರಳ ಮೇಲೆ ಅಳಿಸಿಹೋಗುತ್ತಿದ್ದದ್ದೇನೋ ಬರೆಯುತ್ತಿದ್ದವಳು, ಪಕ್ಕದಲ್ಲಿ ಕುಳಿತಿದ್ದವನನ್ನು ನೋಡಿ ಕೊನೆಗೂ ಮೌನ ಮುರಿದಳು,

"ಸೋ, ಇವಾಗ ನಾನೂ ನಿನ್ನೊಳಗೆ, ನಿನ್ನ ಹುಚ್ಚು ಯೋಚನೆಯೊಳಕ್ಕೆ ಒಂದಾಗುವ ಸಮಯ!"

"ಏನೇ ಹಾಗಂದ್ರೆ?"

"ನಿನ್ನೆ ರಾತ್ರಿಯೆಲ್ಲ ಯೋಚನೆ ಮಾಡಿದೆ ಕಣೋ!"

"ಏನಂತಾ?"

"ನೀನಿಲ್ಲದೇ ನಾನಿಲ್ಲ! ನೀನು ಹೇಳಿದ ಹಾಗೇ ನಾವಿಬ್ಬರೂ ಒಟ್ಟಾಗಿ ಕನಸು ಕಾಣೋಕೆ ಸಾಧ್ಯವಿಲ್ಲ ಅಂದಮೇಲೆ ನೀನು ಹೇಳಿದ ಹಾಗೇ ಈಗಿರುವ ನಮ್ಮಿಬ್ಬರ ಸಾಮೀಪ್ಯದ ನನಸನ್ನೇ ಶಾಶ್ವತ ಮಾಡಿಕೊಳ್ಳೋಣ ಅಂತಾ ನನಗೂ ಅನಿಸಿದೆ."

"ಹೌದು, ಆಗಲಾರದನ್ನೆಲ್ಲ ಕನಸುಕಂಡು, ನಿರಾಸೆಯಾಗಿ ಮನಸು ನೋಯಿಸಿಕೊಳ್ಳೋದು, ಜೀವನ ನಿಸ್ಸಾರ ಮಾಡಿಕೊಳ್ಳೋದು ನನಗಿಷ್ಟವಿಲ್ಲ. ಅದಕ್ಕೇ ಲಿವ್ ಎವೆರಿ ಮೊಮೆಂಟ್ ಅನ್ನೋದು ನನ್ನ ಥಿಯರಿ!"

"ಓಹೋ!", ಅವಳು ಜೋರಾಗಿ ನಕ್ಕಳು, "ನಿನಗೆ ಈಗಾಗ್ಲೇ ಸಾವಿರ ಸಲ ಹೇಳಿದೀನಿ, ಮೊದಮೊದಲು ನಿನ್ನ ಈ ಥಿಯರಿ ಕೇಳಿದಾಗ ನೀನೊಬ್ಬ ದೊಡ್ಡ ಆಪರ್ಚುನಿಸ್ಟ್ ಭಯಂಕರ ಅವಕಾಶವಾದಿ, ಹುಡ್ಗೀರ ವಿಷಯದಲ್ಲಿ ಸಕ್ಕತ್ ಘಟಿಂಗ ಅನ್ನಿಸಿತ್ತು. ಆಮೇಲೆ ನಾನೊಬ್ಳೇ ನಿನ್ನ ಹಿಂದೆ ಬಿದ್ದಿರೋ ಹುಡ್ಗಿ ಅಂತ ತಿಳಿದ ಮೇಲೆ ಇದೆಲ್ಲ ನಿನ್ನ ಹೇಡಿತನದ ಮಾತುಗಳು ಅಂತ ಗೊತ್ತಾಯ್ತು..."

"ಏಯ್!"

"ಕೇಳು, ಕೇಳು... ಆಮೇಲೆ ನಿನ್ನ ಹೇಡಿತನಕ್ಕೆ ಕಾರಣ ನಿನ್ನಲ್ಲಿ ಕನಸುಗಳಿಲ್ಲದೇ ಇರೋದು. ಕನಸುಗಳಿಲ್ಲ, ಕನಸುಕಾಣಲಿಕ್ಕೆ ಧೈರ್ಯವಿಲ್ಲದೇ ನೀನು ಇದಕ್ಕೆಲ್ಲ 'ಲಿವಿಂಗ್ ಎವೆರಿ ಮೊಮೆಂಟ್' ಅಂತ ವ್ಯಾಖ್ಯಾನ ಕೊಟ್ಕೊಂಡಿದೀಯ ಅಂತಾ ಗೊತ್ತಾಯ್ತು. ನಿಜ ಹೇಳ್ಬೇಕಂದ್ರೆ ನೀನು ನಿನ್ನ ಜೀವನ ಹ್ಯಾಗೆಲ್ಲ ನಿನ್ನನ್ನ ಆಡಿಸ್ತಿದಿಯೋ ಹಾಗೇ ಆಡ್ತಿದೀಯ ಅಷ್ಟೇ!"

"ಇದ್ಯಾಕೋ ಅತೀಯಾಯ್ತು ಕಣೇ. ನಂಗೇ ಥಿಯರಿನಾ? ಅನಲಿಸ್ಟ್‌ಗೇ ಅನಲಿಸಿಸ್ಸಾ?"

"ಅದೆಲ್ಲ ಬಿಟ್ಹಾಕು. ಈಗ ವಿಷಯ ಏನಂದ್ರೆ ನಾವಿಬ್ಬರೂ ಆ ದೊಡ್ಡ ಕೋಡುಗಲ್ಲ ಮೇಲೆ ಹತ್ತಿ ಕುಳಿತು, ಆ ಕಡೆಗೆ ಜಾರಿಕೊಂಡು ಬಿಡೋಣ. ನಾವಿಬ್ಬರೂ ಒಂದಾಗಿರೋ ಈ ಕ್ಷಣವನ್ನೇ ಶಾಶ್ವತ ಮಾಡಿಕೊಳ್ಳೋಣ. ನೀನು ಯೋಚಿಸಿದ್ದ ಹಾಗೇ ನಿನಗಿಷ್ಟದಂತೆ ಸಮುದ್ರದ ಅಲೆಗಳಾಗೋಣ. ಬಿರುಮಳೆಯಲ್ಲಿ ಮೈಯೆಲ್ಲ ಕೆಸರು ಮಾಡಿಕೊಂಡು ಕೈ-ಕೈ ಹಿಡಿದುಕೊಂಡು ಬಂದು ಪದೇ ಪದೇ ದಡಕಪ್ಪಳಿಸುತ್ತ ಜೋರಾಗಿ ನಕ್ಕು-ನಕ್ಕು ಸುಸ್ತಾಗೋಣ. ಬೇಸಗೆಯಲ್ಲಿ ಸುಸ್ತಾಗಿ ಕಾದು, ಬೆಂದು ಬಸವಳಿದು, ಮೆಲ್ಲನೆ ಬಂದು ದಡಮುಟ್ಟಿ, ಅರೆಕ್ಷಣದ ವಿಶ್ರಾಂತಿ ತಗೋಳೋಣ. ತೀರದಲ್ಲಿ ಆಡುವ ಮಕ್ಕಳ ಕಾಲಡಿಯ ಮರಳು ಸರಿಸಿ ಅವರನ್ನು ಹೆದರಿಸಿ ಪುಳಕಗೊಳಿಸೋಣ. ಅವರು ಕಟ್ಟುವ ಮರಳ ಗೋಪುರಗಳನ್ನು ಯಾರು ತಲುಪಿ, ಆವರಿಸಿಕೊಂಡು, ಕರಗಿಸಿಕೊಳ್ಳುತ್ತಾರೆ ಅನ್ನೋ ಆಟವಾಡೋಣ."

"ಹಾಗಂತೀಯಾ?"

"ಯಾಕೆ? ಮತ್ತೆ ಹೆದರಿಕೇನಾ?"

"ಹೇ! ಒರಿಜಿನಲ್ ಪ್ಲಾನು ನಂದೇ ತಾನೇ?"

"ಹಾಗಾದ್ರೆ ಹೇಳು, ರೆಡೀನಾ?"

ಅವನು ಅವಳ ಬಳಿಗೆ ಬಾಗಿ, "ಇದೇ ಶಾಶ್ವತವಾಗಿರೋದಾದ್ರೆ ನಾನು ರೆಡಿ! ನೀನಿಲ್ದೇ ನಾನಿರೋದನ್ನ ಊಹಿಸಿಕೊಳ್ಳೋಕೂ ಸಾಧ್ಯವಿಲ್ಲ." ಅವನು ಅವಳ ಕೈಹಿಡಿದುಕೊಂಡು ತನ್ನ ಎದೆಯ ಮೇಲಿಟ್ಟುಕೊಂಡ. ಅವರಿಬ್ಬರ ಮುಖಗಳು ಎಷ್ಟು ಸಮೀಪದಲ್ಲಿದ್ದವು ಅಂದರೆ ಇವಳು ಮುಖ ತಿರುಗಿಸಿಕೊಳ್ಳಬೇಕು ಅಂದುಕೊಂಡಳಾದರೂ ಆಗಲಿಲ್ಲ. ಅವನು ಮೆಲ್ಲನೆ ಇವಳ ಮೂಗಿನ ತುದಿಗೆ ತನ್ನ ತುಟಿ ತಾಗಿಸಿದ, ನಂತರ ತುಟಿಗೆ...

ಸಮುದ್ರದ ದೊಡ್ಡದೊಂದು ಕಳ್ಳ ಅಲೆ ಕಾಯುತ್ತಿದ್ದಂತೆ ಬಂದು ಇವರಿಬ್ಬರನ್ನೂ ಅಪ್ಪಳಿಸಿ, ತೊಯ್ಯಿಸಿತು.

"ಛ್ಹ!", ಉಸಿರುಗಟ್ಟಿದಂತಾಗಿ ಅವಳು ನಕ್ಕು ಅಣಕಿಸಿದಳು, "ಇದು ನಿನ್ನ ಧೈರ್ಯದ ಪುರಾವೇನಾ?"

ಅವನು ಮಾತನಾಡಲಿಲ್ಲ. ಅಲೆಗಳ ಹಿಂದೆ, ದೂರದಲ್ಲಿ ಕೆಸರು ಮುಗಿದು, ನೀಲಿಯಾಗಿದ್ದ ಸಮುದ್ರದ ಪರಿಧಿಯನ್ನೇ ನೋಡುತ್ತಿದ್ದವನ ಮುಖ ಇವಳ ಮುಖಕ್ಕಿಂತ ಕೆಂಪಾಗಿತ್ತು, ಮತ್ತೆ ಜಿಟಿಜಿಟಿ ಮಳೆ ಶುರುವಾಯಿತು. ಇವಳು ಅವನ ಕತ್ತಿನ ಹಿಂದಿನ ತಲೆಗೂದಲ ಕೊನೆಯನ್ನು ಹಿಡಿದೆಳೆದಳು, ಅವನು ನೋವಿನಿಂದ ಮುಖ ಕಿವುಚಿದವನಂತೆ ಮಾಡಿ, ನಕ್ಕು, ಇವಳೆಡೆಗೆ ತಿರುಗಿ "ಮೊದಲ ಮುತ್ತು ಸಿಹಿಯಾಗಿರುತ್ತೆ ಅಂದ್ಕೊಂಡಿದ್ದೆ, ಇದ್ಯಾಕೋ ಉಪ್ಪಾಗಿತ್ತು!" ಅಂದ.

ಇವಳು ಅವನ ಹಣೆಗೆ ಕೈಬೆರಳುಗಳಿಂದ ಮೊಟಕಿ ನಕ್ಕಳು, "ಇಬ್ಬರಿಗೂ ಮೊದಲನೆಯದಾದ್ರೆ ಮಾತ್ರ ಹಾಗೆ!" ಚಾಚಿದವನ ಕೈಗೆ ಸಿಕ್ಕದಂತೆ ತಟ್ಟನೆ ಪಕ್ಕಕ್ಕೆ ಹೊರಳಿ ಎದ್ದು ಕೋಟೆಯ ಬುರುಜಿನತ್ತ ನಡೆದಳು, ಅವನು ಎದ್ದು ಹಿಂಬಾಲಿಸಿದ.

* * * * * * * *

"ಮೆಲ್ಲನೆ ನಡೀ. ತುಂಬಾ ಜಾರ್ತಾ ಇದೆ!" ಇಬ್ಬರೂ ಕೋಟೆಯ ಬುರುಜು ಹತ್ತಿ, ಅಲ್ಲಿಂದ ಸಮುದ್ರದ ಕಡೆಗಿದ್ದ ದೊಡ್ಡ ಕೋಡುಗಲ್ಲಿನ ಬೆನ್ನ ಮೇಲಿಳಿದರು. ಕೈ-ಕೈ ಹಿಡಿದುಕೊಂಡು ಮೆಲ್ಲನೆ ಕೋಡುಗಲ್ಲಿನ ಮೇಲೆ ನಡೆದುಕೊಂಡು ಸಮುದ್ರದ ಹತ್ತಿರಕ್ಕೆ ಬಂದರು. ಅಷ್ಟರಲ್ಲಿ ಬಲವಾಗಿ ಬಂದು ಬಂಡೆಯ ಸಮುದ್ರಮುಖಿ ಭಾಗಕ್ಕೆ ಅಪ್ಪಳಿಸಿದ ಸಮುದ್ರದಲೆ ಇವರನ್ನು ಬೆಚ್ಚಿಸಿ, ಉಸಿರು ಗಟ್ಟಿಸಿ ನೆನೆಸಿ ಒದ್ದೆ ಮಾಡಿತು. ಇಬ್ಬರೂ ನಿಂತು, ನಕ್ಕು, ಸಾವರಿಸಿಕೊಂಡು, ಜೋಪಾನವಾಗಿ ಸೀಳು ಮುಖವಿದ್ದ ಬಂಡೆಯ ಕೊನೆಯ ಭಾಗಕ್ಕೆ ಹತ್ತಿದರು. ಅತ್ತ ಕಡೆಯಿಂದ ಸಮುದ್ರದಲೆಗಳ ಆಕ್ರಮಣ ಶುರುವಾಯಿತು.

"ಇಲ್ಲಿ ಅಲೆಗಳ ತಳದಲ್ಲಿ ಸಮುದ್ರ ಹತ್ತಡಿಗಿಂತಲೂ ಆಳ ಇದೆ ಅನ್ಸುತ್ತೆ" ಒಬ್ಬೊರಿಗೊಬ್ಬರ ಮಾತು ಕೇಳಿಸುತ್ತಿರಲಿಲ್ಲ. ಮೆಲ್ಲನೆ ಕುಳಿತು, ಕಾಲುಗಳನ್ನು ಸಮುದ್ರದೆಡೆಗೆ ಚಾಚಿಕೊಂಡರು. "ಗಟ್ಟಿ ಹಿಡ್ಕೊಂಡ್ ಕೂತ್ಕೋ!" ಅಲೆಗಳು, ಅವರಿಬ್ಬರೆತ್ತರಕ್ಕೂ, ಕೆಲವೊಮ್ಮೆ ಅವರಿಗಿಂತಲೂ ಎತ್ತರಕ್ಕೆ ಹಾರಿ ಬಂಡೆಯನ್ನೂ ಅವರನ್ನೂ ಅಪ್ಪಳಿಸಲಾರಂಭಿಸಿದವು. ಇವರನ್ನು ಸೆಳೆದುಕೊಳ್ಳಲು ಸಮುದ್ರಕ್ಕೆ ಅವಸರವಾದಂತಿತ್ತು. ಎಡಗಡೆಗೆ ಅವನ ಎದೆಗೆ ಒರಗಿ ಕುಳಿತವಳ ಬಲಗೈ ಹಿಡಿದುಕೊಂಡ. ಇಬ್ಬರೂ ನಡುಗುತ್ತಿದ್ದರು, ಒಬ್ಬರನೊಬ್ಬರು ನೋಡಿಕೊಂಡರು. ಇಬ್ಬರ ಕಣ್ಣಲ್ಲೂ ಉಪ್ಪುಪ್ಪು ನೀರು. ಮಳೆಯಾ? ಕಂಬನಿಯಾ ಅಥವಾ ಅಲೆಗಳ ನೀರಾ?

"ಹುಡುಗೀ ನಾನು ನಿನ್ನೊಟ್ಟಿಗಿರೋ ಪ್ರತೀ ಕ್ಷಣವೂ ಹಾಗೇ ನಿಂತು ಬಿಡಲಿ ಅಂತಾ ಬಯಸಿದವನು ನಾನು. ಬರೀ ನನ್ನ ಕಣ್ಣ ದೃಷ್ಟಿಯಿಂದ ದೂರಾದಾಗಲೂ ಚಡಪಡಿಸಿದವನು ನಾನು. ಈಗ ಯಾಕೋ ಇದೆಲ್ಲ ನನ್ನ ಸ್ವಾರ್ಥಸಾಧನೆಯೇನೋ ಅನಿಸ್ತಿದೆ!" ಅವಳು ಮೆತ್ತಗೆ ನುಡಿದಳು, "ಅದೆಲ್ಲ ಮಾತಾಡಬೇಡ..." ಅವಸರವಿಲ್ಲದಂತೆ ಎಷ್ಟೋ ಹೊತ್ತು ಇಬ್ಬರೂ ಅಲೆಗಳ ಆಕ್ರಮಣದಲ್ಲಿ ಮೈಮನ ತೋಯಿಸಿಕೊಳ್ಳುತ್ತ ಉಸಿರುಗಟ್ಟಿಸಿಕೊಳ್ಳುತ್ತ ಹಾಗೇ ಕುಳಿತಿದ್ದರು. ಕೊನೆಗಿವಳು ನುಡಿದಳು, "ಏನು? ಹಾರೋಣ್ವಾ?" ಕಳೆದುಹೋದವನಂತೆ ಸಮುದ್ರದಂಚನ್ನೇ ನೋಡುತ್ತಿದ್ದ ಅವನು ಜೋರಾಗಿ ಉಸಿರುಬಿಟ್ಟ. ಅವಳು ಮತ್ತೆ ನುಡಿದಳು, "ಆದ್ರೆ ಅದಕ್ಕಿಂತ ಮುಂಚೆ ನನಗೆ ಹೇಳಬೇಕಾದುದನ್ನು ಮೊದಲು ಹೇಳಿಬಿಡು, ಈಗ್ಲೂ ಸುಮ್ನೇ ನನ್ನ ರೇಗಿಸಬೇಡ!" ಅವಳ ತುಟಿಯಂಚಿನಲ್ಲಿ ಸಣ್ಣ ನಗುವರಳಿತು, "ಮೂರು ಪದಗಳು... ತ್ರೀ ವರ್ಡ್ಸ್!'

...

* * * * * * * *

ಹೊರಗೆ ಸುರಿಯುತ್ತಿದ್ದ ಮಳೆಯಿಂದಲೂ, ಸೆಖೆಯಿಂದಲೂ ಒಳಗೆ ಮಂಜುಗಟ್ಟುತ್ತಿದ್ದ ದೊಡ್ಡ ಗಾಜಿನ ಕಿಟಕಿಯ, ಆರನೇ ಮಹಡಿಯ ರೂಮಿನಲ್ಲಿ ಡ್ರೆಸ್ಸಿಂಗ್ ಟೇಬಲ್ ಮೇಲೆ ಇವರು ಉಪಯೋಗಿಸದೇ ಇದ್ದ ಆಶ್ ಟ್ರೇಯ ಅಡಿಯಲ್ಲಿ ಒಂದು ಪತ್ರ, ಇವಳ ಕೈಬರಹದಲ್ಲಿ...

"ಈ ಪತ್ರ ಯಾರಿಗೆ ಮೊದಲು ಸಿಕ್ಕುತ್ತದೋ ಅವರಿಗಲ್ಲದೇ, ನನ್ನಮ್ಮ ಅಪ್ಪನಿಗೆ ಮತ್ತು ನನ್ನ ಅತ್ತೆಗೆ (ನಾನು ಇವನನ್ನು ಮದುವೆಯಾಗದಿದ್ದರೂ ನಿಮಗೆ ಸೊಸೆಯಾಗಲಾರೆನೇ ಅತ್ತೆ?)

ನನ್ನನ್ನು ಕ್ಷಮಿಸಿ ಅಪ್ಪ. ಏನಕ್ಕೂ ಕೊರತೆ ಬಾರದಂತೆ ಬೆಳೆಸಿದ್ದಿರಿ ನನ್ನನ್ನು. ಇವನು ಸಿಕ್ಕ ಮೇಲೆ ಕೊರತೆಗಳಿಲ್ಲದುದೇ ದೊಡ್ಡ ಕೊರತೆಯಾಗಿ ಕಾಣಿಸಿತು. ಕೊರತೆಗಳಿಲ್ಲದೇ, ಏನಾದರೂ ಬೇಕು ಎಂಬ ಹಂಬಲವಿಲ್ಲದೇ ಜೀವಿಸುವುದಾದರೂ ಹೇಗಪ್ಪಾ? ಕನಸುಗಳಿಲ್ಲದೇ ಜೀವಿಸಲು ಅಸಾಧ್ಯ ಅಂತಾರೆ. ಇವನು ಸಿಗುವ ಮುನ್ನ ನನ್ನ ಕನಸುಗಳಲ್ಲಿಯೂ ಕಿಂಚಿತ್ತಾದರೂ ಬೇಕುಗಳ ಸುಳಿವಿರಲಿಲ್ಲ. ಅದಕ್ಕೇ ಇವನನ್ನು ನೋಡಿದ ಮೇಲೆ ನನಗೆ ಇವನು ಬೇಕೂಂತ ಅನಿಸಿದ್ದು. ಇವನ ಕೊರತೆಗಳೆಲ್ಲ ನನಗೂ ಬೇಕು, ನಾನೂ ಹಂಚಿಕೋಬೇಕು, ನಾನೂ ಒದ್ದಾಡಬೇಕು ಅಂತೆನಿಸಿದ್ದು. ಆದರೆ ಅದಕ್ಕಿಂತಲೂ ಇವನಲ್ಲಿ ನನಗಿಷ್ಟವಾದುದು ಮತ್ತು ನಂಬಲು ಕಷ್ಟವಾದುದು ಅಂದ್ರೆ ಇವನಿಗೆ ಕನಸುಗಳೇ ಇರಲಿಲ್ಲ. ಹ್ಹ! ಕನಸುಗಳು ನನಸಾಗದೇ ಭ್ರಮನಿರಸನಕ್ಕೆ ಕಾರಣವಾಗುತ್ತವೆ ಅನ್ನೋದು ಇವನ ಸಿದ್ಧಾಂತ. ಅದರ ಬದಲು ನನಸನ್ನೇ ಕನಸಿನ ತರ ಬದುಕಿದರೆ, ಕನಸುಗಳೆಲ್ಲ ನನಸೇ ಅನ್ನೋ ವಾದ ಬೇರೆ. ನಂಗಿವನು ಇಷ್ಟ ಅಪ್ಪ. ಪ್ರಾಣ ಹೋಗೋವಷ್ಟು ಇಷ್ಟ. ಇವನ ಪ್ರಾಣ ತಿನ್ನೋವಷ್ಟು ಜಗಳಾಡೋ ಇಷ್ಟ. ಕನಸುಗಳೇ, ಭವಿಷ್ಯದ ನಿರೀಕ್ಷೆಗಳೇ ಇಲ್ಲವಾದ ಮೇಲೆ ಬದುಕು ನಮ್ಮ ಹತೋಟಿಗೆ ಸಿಕ್ಕ ಹಾಗೆ ತಾನೇ? ಅದರ ಆದಿ, ಅಂತ್ಯವನ್ನೆಲ್ಲ ನಾವೇ ಬರೆದುಕೊಂಡು ಬಿಡಬಹುದಲ್ಲವೇ. ನಾವಿಬ್ಬರೂ ಒಟ್ಟಿಗಿರುವ, ಒಟ್ಟಿಗೇ ಜಗಳಾಡಿಕೊಂಡಿರುವ ಈ ನನಸೇ ನಮ್ಮ ಈ ಕನಸಿನ ಅಂತ್ಯವಾಗಲಿ ಅಂತ ಅವನು ಬಯಸಿದ. ಆ ಬಯಕೆಯನ್ನೇ ನಾನೂ ಹಂಬಲಿಸಿದ್ದೇನೆ. ದಯವಿಟ್ಟು ಕ್ಷಮಿಸಿ. ಈ ಜೀವನದ ಕನಸಿನಲ್ಲಿ ಕುರುಹೂ ಉಳಿಸದಂತೆ ಆ ಲೋಕದ ನನಸಿನೊಳಕ್ಕೆ ಎಚ್ಚೆತ್ತುಕೊಳ್ಳಬೇಕು ಅಂದುಕೊಂಡಿದ್ದೇವೆ. ಆದರೂ ಈ ಸಮುದ್ರ ನಮ್ಮ ಕುರುಹನ್ನೇನಾದರೂ ಉಳಿಸಿ, ನಿಮಗೆ ತಂದೊಪ್ಪಿಸಿದರೆ, ಧೈರ್ಯ ತಂದುಕೊಳ್ಳಿ. ಈ ಕನಸಿನಿಂದ ಹೊಸ ನನಸಿನೊಳಕ್ಕೆ ಎಚ್ಚೆತ್ತುಕೊಂಡ ನಿಮ್ಮ ಮಗಳು ಮತ್ತು ಅಳಿಯನನ್ನು ಹರಸಿ. ಅಮ್ಮಾ, ಐ ಮಿಸ್ ಯೂ ವೆರಿ ಮಚ್!

ಅತ್ತೇ ಈ ಹೇಡಿ ಮಗನನ್ನು ಕಟ್ಟಿಕೊಂಡು ಹೇಗೆ ಹೆಣಗಿದಿರೋ ಗೊತ್ತಿಲ್ಲ. ಅವನೇನಾದರೂ ಹೆದರಿ ವಾಪಸ್ಸು ಬಂದರೆ ಅದು ನಿಮ್ಮ ಸಲುವಾಗಿಯಲ್ಲದೇ ನನ್ನ ಸಲುವಾಗಿ ಅಲ್ಲ ಅಂತ ಗೊತ್ತಿದೆ, ವಾಪಸ್ಸು ಬರಲಾರದುದಕ್ಕೆ ಅವನ ಪರವಾಗಿ ನಾನು ಕ್ಷಮೆ ಕೇಳ್ತೀನಿ.

ನಮಗೆ ಯಾರ ಬಗ್ಗೆಯೂ ಬೇಸರವಿಲ್ಲ. ನಮ್ಮ ಬಗ್ಗೆ ಬೇಸರಗೊಂಡವರಿಗೆ ನಮ್ಮ ಕ್ಷಮಾಪಣೆಯ ಅರ್ಪಣೆಯ ಕೊನೇ ಚಾನ್ಸ್, ದಯವಿಟ್ಟು ಕ್ಷಮಿಸಿಬಿಡಿ,

ನೇಹಾ"

* * * * * * * *

ಇವರು ವಾಪಸ್ಸು ಹತ್ತಿದ ಖಾಸಗಿ ಬಸ್ಸು ಸುತ್ತೀಬಳಸಿ ಕೊನೆಗೂ ಕಾಸರಗೋಡು ತಲುಪಿದಾಗ ರಾತ್ರಿ ಎಂಟೂವರೆ. ಅವನ ಚುಕ್ಕಿ ಕಂಗಳಲ್ಲಿ ಆಗಲೇ ನಿದ್ದೆ. ಬಸ್ಸಿನಲ್ಲಿ ಬರುವಾಗಲೂ, ಕೆಳಗಿನ ಹೊಟೆಲ್‌ನಲ್ಲಿ ಪೂರಿ, ಕಡಲೇಕಾಳಿನ ಪಲ್ಯ ತಿನ್ನುವಾಗಲೂ ಮೌನವಾಗಿದ್ದವನನ್ನು ಇವಳು ತಿವಿದಳು,

"ನಿಖಿಲ್‌ನ ಯಾವ ಎಂಜಿನಿಯರಿಂಗ್ ಕಾಲೇಜ್‌ಗೆ ಸೇರಿಸ್ಬೇಕು ಅಂತಾ ಯೋಚನೆ ಮಾಡ್ತಿದೀಯಾ?"

ಅವನ ಮುಖದಲ್ಲಿ ಬರೀ ಪ್ರಶ್ನೆಗಳೇ. "ಆಂ? ಏನೂ? ನಿಖಿಲ್? ಯಾರು?"

"ಅದೇ ನಮ್ಮ ಮಗ, ನಿಖಿಲ್! ಅವ್ನನ್ನ ಯಾವ ಎಂಜಿನಿಯರಿಂಗ್ ಕಾಲೇಜ್‌ಗೆ ಸೇರಿಸ್ಬೇಕೂಂತ ಯೋಚ್ನೆ ಮಾಡ್ತೀದೀಯಾ? ಅಂತ ಕೇಳ್ದೆ".

"ತುಂಬಾನೇ ದೂರದೃಷ್ಟಿಯಾಯ್ತು ನಿಂದು!", ಇವಳ ಕಣ್ಣುಗಳನ್ನೇ ನೋಡುತ್ತ ನುಡಿದ, "ನಾನಿನ್ನೂ ಮದುವೆ ಮಾಡಿಕೊಂಡು ಮತ್ತೆ ಕಾಸರಗೋಡಿಗೆ, ಇದೇ ಹೋಟೆಲಿಗೆ ಬರೋದರ ಬಗ್ಗೆ ಕನಸು ಕಾಣ್ತಿದ್ದೆ"

ಇವಳಿಗೆ ಅವನ ಕಣ್ಣುಗಳಿಂದ ದೃಷ್ಟಿ ಸರಿಸಲು ಆಗಲೇ ಇಲ್ಲ. ಕಣ್ಣ ರೆಪ್ಪೆಗಳ ಬಡಿಯಲೂ ಮರೆತು, ಸುಮ್ಮನೆ ಹಾಗೇ ನೋಡುತ್ತಲೇ ಇದ್ದಳು, ಅವನು ಸರಾಗವಾಗಿ ಎದ್ದು ಕೈತೊಳೆದುಕೊಳ್ಳಲು ಹೋದ. ಅವನು ಅತ್ತ ಹೋದಾಗ ನಿಟ್ಟುಸಿರು ಬಿಟ್ಟು ತನ್ನ ಎದೆಯಲ್ಲಿ ಸಿಕ್ಕಿಕೊಂಡಿದ್ದ ಉಸಿರನ್ನು ಸರಾಗಮಾಡಿಕೊಂಡಳು, ಮೊಣಕೈಯಿಂದ ಕೆಂಪಡರಿದ್ದ ಕೆನ್ನೆಗಳನ್ನು ಉಜ್ಜಿಕೊಂಡಳು. ಕಣ್ಣುಗಳಲ್ಲಿ ನೀರೂರಿದ್ದು ರಾತ್ರಿಯೆಲ್ಲ ನಿದ್ದೆಗೆಟ್ಟಿದ್ದ ಆಯಾಸಕ್ಕೋ ಅಥವಾ...?

ಕೈತೊಳೆದು ಬಂದು ಎದುರಿಗೆ ಕುಳಿತ ಅವನು ಇವಳ ಬಲಗೆನ್ನೆಯ ಮೇಲೇನೋ ಧೂಳಿದೆಯೆಂಬಂತೆ ಒದ್ದೆ ಕೈಬೆರಳುಗಳಿಂದ ತೊಡೆದ. ತಟ್ಟನೆ ತಲೆತಗ್ಗಿಸಿದವಳ ಕಣ್ಣಹನಿ, ಪ್ಲೇಟಿನಲ್ಲೇ ಕೈತೊಳೆದಿದ್ದ ನೀರಿನಲ್ಲಿ ಫಳ್ಳೆಂದವು. ಅವನು ಮೆಲ್ಲನುಸುರಿದ,

"ಐ ಲವ್ ಯೂ...!"

ಇವಳು ಕತ್ತೆತ್ತಿ ಅವನನ್ನು ನೋಡಿ, ಎಡ ತುಟಿಯಂಚಿನಲ್ಲೇ ನಗುವರಳಿಸಿದಳು, "...ಆದ್ರೆ ಈ ಪ್ಲೇಟಿನಲ್ಲಿ ಕೈತೊಳೆಯೋ ಕೆಟ್ಟ ಅಭ್ಯಾಸ ಮಾತ್ರ ಬಿಟ್ರೆ ಮಾತ್ರ!" ಇವಳು ತಲೆಯಲ್ಲಾಡಿಸಿ, ಹಲ್ಲು ಕಿರಿದು,

"ಎಂಥಾ ರೊಮ್ಯಾಂಟಿಕ್ ಜಾಗದಲ್ಲಿ ಹೇಳ್ತಾ ಇದೀಯ ನೋಡು?", ಎಂದು ತನ್ನ ಒದ್ದೆಗೈಯಲ್ಲಿದ್ದ ನೀರ ಹನಿಗಳನ್ನು ಅವನತ್ತ ಝಾಡಿಸಿದಳು...

ಇಬ್ಬರೂ ತಿಂಡಿ ತಿಂದು ರೂಮಿಗೆ ಬಂದು ಕುಳಿತುಕೊಂಡರು. ಸಣ್ಣಗಾಗುತ್ತಿದ್ದ ನಿದ್ದೆಗಣ್ಣಲ್ಲೂ ಅವನು ಮಾತನಾಡಿದ, ಇವಳು ತಡೆಯಲಿಲ್ಲ. ಸುಮ್ಮನೆ ಅವನ ತೊಡೆಯ ಮೇಲೆ ಮಲಗಿಕೊಂಡು ಅವನ ಮಾತುಗಳಿಗೆ ಕಿವಿಗೊಟ್ಟಳು, ಆಗೀಗ ಅವನ ಸಣ್ಣ-ಸಣ್ಣ ಕಣ್ಣುಗಳನ್ನು ಹುಳ ಹಿಡಿಯುವವರಂತೆ ಬೆರಳುಗಳಲ್ಲಿ ಹಿಡಿದು ಮುತ್ತಿಟ್ಟುಕೊಂಡಳು. ತನ್ನ ತೊಡೆಯ ಮೇಲೆ ಹರಡಿದ್ದ ಇವಳ ಕೂದಲುಗಳ ಸಿಕ್ಕಿನೊಳಗೆ ಕೈಬೆರಳುಗಳನ್ನು ಸಿಕ್ಕಿಸಿಕೊಳ್ಳುತ್ತ, ಬಿಡಿಸಿಕೊಳ್ಳುತ್ತ ಅವನು ಮಾತನಾಡುತ್ತಲೇ ಹೋದ, ತನ್ನ ಮೊಟ್ಟ ಮೊದಲ, ಹೊಚ್ಚ ಹೊಸ ಪುಟ್ಟ ಕನಸೊಂದರ ಬಗ್ಗೆ; ಕೊನೆಗೂ ಕನಸು ಕಾಣಲು ಸಿಕ್ಕ ಧೈರ್ಯದ ಬಗ್ಗೆ; ಇವಳು ತನ್ನ ಕಣ್ಣ ಕನಸಿನ ಬಿಂಬವಾದ ಬಗ್ಗೆ, ಕಟ್ಟ ಕಡೆಗಾದರೂ ತಮ್ಮ ಮಕ್ಕಳ ಹೆಸರಿನ ಬಗ್ಗೆ – ನಿಖಿಲ್ ಇಲ್ಲಾಂದ್ರೆ ನಮಿತಾ!

"ಐ ಲವ್ ಯೂ.." "ಐ ಲವ್ ಯೂ ಟೂ.." "ಐ ಲವ್ ಯೂ ತ್ರೀ.." "ಐ ಲವ್ ಯೂ ಫೋರ್ ದೆನ್"

"ಹ್ಹ ಹ್ಹ ಹಾ..."

ಎಷ್ಟೋ ಸಮಯದ ನಂತರ ಅವನು "ನಂಗೆ ಸಕ್ಕತ್ ನಿದ್ದೆ ಬರ್ತಿದೆ" ಅಂತ ಹೇಳಿದ. "ಓಕೆ..." ಎಂದು ಇವಳು ಬಾಗಿ ಅವನ ಹಣೆಯ ಮೇಲೆ ಮುತ್ತನಿತ್ತಳು. ಅವನು ಎದ್ದು ಬಾತ್‌ರೂಮಿಗೆ ಹೋಗಿ ಬರುವಷ್ಟರಲ್ಲಿ, ಇವಳು ಸಂಜೆ ರೂಮಿನೊಳಕ್ಕೆ ಬಂದಾಗ ಆಶ್ ಟ್ರೇಯಡಿಯಿಂದ ಮುದುರಿ, ಮಡಿಸಿ ತೆಗೆದಿಟ್ಟಿದ್ದ ಪತ್ರವನ್ನು ಓದಿಕೊಂಡಳು. ನಂತರ ಈಚೆಗೆ ಬಂದವನಿಗೆ ಕೇಳುವಂತೆ ಮೆಲ್ಲನೆ "ಹೇಡಿ ನನ್ಮಗ!" ಅಂದು ಸಣ್ಣಗೆ ಹರಿದಳು,

ಅವನು "ಯಾರು? ನಾನಾ?" ಅಂದ.

"ಏ ಇಲ್ಲಪ್ಪಾ, ಬೇರೆ ಯಾರೋ!"

"ನಂಗೊತ್ತು ನಂಗೇ ಬೈದಿದ್ದು ನೀನು. ಆದ್ರೆ ಈವಾಗ ಜಗಳ ಆಡೋಕೆ ನಂಗೆ ಟೈಮಿಲ್ಲ"

ಹರಿದ ಕಾಗದದ ಚೂರುಗಳನ್ನು ಕಸದ ಬುಟ್ಟಿಗೆ ಹಾಕಿ, ಇವಳೂ ಬಾತ್‌ರೂಮಿಗೆ ಹೋಗಿ ಬರುವಷ್ಟರಲ್ಲಿ ಅವನು ಮಲಗಿ ನಿದ್ದೆ ಹೋಗಿದ್ದ. ತನ್ನ ಪಾಲಿನ ಹಾಸಿಗೆಯಲ್ಲಿ ಎಡಕ್ಕೆ ತಿರುಗಿಕೊಂಡು, ಮಗುವಿನಂತೆ ಕೈಕಾಲುಗಳನ್ನೆಲ್ಲ ಮುದುರಿಕೊಂಡು ಮಲಗಿದ್ದ ಅವನನ್ನು ನೋಡಿ ಇವಳು ನಸುನಕ್ಕಳು. ದೀಪವಾರಿಸಿ ಬಂದು ಬಲಗಡೆ ಮಲಗಿಕೊಂಡಳು. ಸಲ್ಪ ಸಮಯದ ನಂತರ ಅವನೆಡೆಗೆ ತಿರುಗಿ, ನಿದ್ದೆಯಲ್ಲಿ ಬಿಸಿಯುಸಿರೆಳೆಯುತ್ತಿದ್ದವನ ಹತ್ತಿರಕ್ಕೆ ಬಂದು, ತಬ್ಬಿಕೊಂಡು, ಅವನ ಹೊಟ್ಟೆಯೊಳಕ್ಕೆ ಕೈಹಾಕಿಕೊಂಡು ಮಲಗಿಕೊಂಡವಳ ಕಿವಿಗಳಲ್ಲಿ ಇನ್ನೂ ಆ ಮೂರು ಪದಗಳೇ ರಿಂಗಣಿಸುತ್ತಿದ್ದವು. ಬೇಕಲ್ ಕೋಟೆಯ, ಕ್ಯಾರಮೆಲ್ ಮಿಲ್ಕ್ ಶೇಕ್ ಸಮುದ್ರದ ಹುಚ್ಚೆದ್ದಿದ್ದ ಅಲೆಗಳೆದುರು, ಸೀಳುಬಂಡೆಯ ಮೇಲೆ, ಅಪ್ಪಳಿಸುತ್ತಿದ್ದ ಸಮುದ್ರದಲೆಗಳೆದುರಾಗಿ ಕುಳಿತು, ನೆನೆ–ನೆನೆದು ಪತರುಗುಟ್ಟುತ್ತಿದ್ದಾಗ ಕೊನೆಯದಾಗಿ ಇವಳು ಕೇಳಿದ–ಅವನು ಹೇಳಿದ–ಇವಳು ನಿರೀಕ್ಷಿಸದೇ ಇದ್ದ ಮೂರು ಪದಗಳು, ತ್ರೀ ಮ್ಯಾಜಿಕಲ್ ವರ್ಡ್ಸ್! **"Let us dream !"...**

"ದೊಡ್ಡ ಹೇಡಿ ನನ್ಮಗ!" ಅಂತ ತನ್ನೊಳಗೇ ಪಿಸುಗುಟ್ಟುತ್ತ ಅವನ ಬಲಬುಜಕ್ಕೆ ಒಂದು ಮುತ್ತನಿತ್ತಳು, ಇವಳ ತಲೆಯಲ್ಲಿ ಅಸಂಖ್ಯ ಯೋಚನೆಗಳು, ಹೊಚ್ಚ ಹೊಸ ರಾಗ ಮಿಡಿಯುತ್ತಿದ್ದ ಎದೆಯ ತೋಟದೊಳಗೆ ಸಾವಿರಾರು ಪಾತರಗಿತ್ತಿಗಳು, "ನಾಳೇನೂ, ಸಂಜೆ ವಾಪಸ್ಸು ಬೆಂಗಳೂರಿನ ಬಸ್ಸು ಹತ್ತುವ ಮುಂಚೆ ಸಮುದ್ರ ತೀರಕ್ಕೆ ಹೋಗಿಬರಬೇಕು, ನಾವಿಬ್ಬರೂ ಅದಕ್ಕೊಂದು ಥ್ಯಾಂಕ್ಸ್ ಹೇಳಬೇಕು, ಆಮೇಲೆ ನನ್ನದೊಂದು ಪರ್ಸನಲ್ ಥ್ಯಾಂಕ್ಸ್! ಅಪ್ಪನಿಗೆ ಇದೆಲ್ಲ ವಿಷಯ ಹೇಳಬೇಕು, ಇವರಮ್ಮನ್ನನ್ನು ನೋಡಬೇಕು, ಪಾಪ, ಸುನೀತನಿಗೆ ಫೋನ್ ಮಾಡಿ ಇಂಥವನನ್ನು ನನ್ನ ಕನಸಿನೊಳಕ್ಕೆ ಎಳೆದುಕೊಂಡದ್ದನ್ನು ಹೇಳಿ, ಮದುವೆಗೆ ಬಂದೂ ಬರದುದ್ದಕ್ಕಾಗಿ ಕ್ಷಮೆ ಕೇಳಬೇಕು, ಹಾಗೇ ಒಂದು ಥ್ಯಾಂಕ್ಸ್ ಕೂಡಾ ಹೇಳಬೇಕು ಅವಳಿಗೆ, ಅವಳು ಹನಿಮೂನಿಂದ ಬಂದ ಮೇಲೆ ಗಂಡ ಹೆಂಡತಿಯರಿಬ್ಬರಿಗೂ ನಾವಿಬ್ಬರೂ ಸೇರಿ ಪಾರ್ಟಿ ಕೊಡಬೇಕು, ಎಲ್ಲಕ್ಕಿಂತ ಮೊದಲು..." ಮೆಲ್ಲನೆ ಇವಳಿಗೂ ನಿದ್ದೆಯಾವರಿಸಿತು. ಹೊರಗಡೆ ಕತ್ತಲ ರಾತ್ರಿಯ, ಸೆಖೆಸೆಖೆಯ ಸುರಿಮಳೆಯ ಸಂಗೀತದ ಇನ್ನೊಂದು ಕಚೇರಿ ಶುರುವಾಯಿತು.

ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** *ks_shivu@yahoo.com*